ರೀತಿಯಾದ ಸನ್ನಿವೇಶವನ್ನು ಎದುರಿಸಿ ಸಾವನ್ನಪ್ಪಿರುವುದೂ ಕೂಡ ನಮ್ಮ ಮುಂದೆ ಇದೆ. ಆದ್ದರಿಂದ ವಿದ್ಯುಚ್ಛಕ್ತಿ ಮಂಡಳಿಯವರು ನನ್ನ ಕ್ಷೇತ್ರದಲ್ಲಿ ಬರತಕ್ಕಂಥಹ ಎಲ್ಲಾ ವಿದ್ಯುಚ್ಛಕ್ತಿ ತಂತಿಯನ್ನು ಅವೆಲ್ಲವೂ ಕೂಡ ಸ್ಟೆಂಗ್ತೆನ್ ಕಳೆದುಕೊಂಡಿವೆ. ಅವೆಲ್ಲವನ್ನೂ ಕೂಡ ಬದಲಾಯಿಸಿ. ದಿನದಲ್ಲಿ ಕೊಡತಕ್ಕಂತಹ 3 ಗಂಟೆ ಕರೆಂಟ್‌ನಲ್ಲಿ ರೈತ ಬೆಳಗಿನ ಜಾವ ತೋಟಕ್ಕೆ ಹೋಗುವಂತಹ ಸಂದರ್ಭದಲ್ಲಿ ಈ ದುರ್ಘಟನೆ ನಡೆದಿದೆ, ಇದಕ್ಕಾಗಿ ಸರ್ಕಾರವು ಸೂಕ್ತವಾದ ಪರಿಹಾರವನ್ನು ಕೊಡಬೇಕು, ಅಲ್ಲಿರತಕ್ಕಂತಹ ಎಲ್ಲಾ ತಂತಿಗಳನ್ನು ಕೂಡ ಬದಲಾಯಿಸುವಂತಹ ವ್ಯವಸ್ಥೆಯನ್ನು ಕೂಡ ಮಾಡಬೇಕು. ಅದನ್ನು ವಿದ್ಯುಚ್ಛಕ್ತಿ ಮಂಡಳಿಯವರು ಮಾಡಬೇಕಾಗುತ್ತದೆ. ಎಲ್ಲಾ ವೈರ್‌ಗಳೂ ಕೂಡ ಕಾರ್ನರ್‌ನಲ್ಲಿ ವಿದ್ಯುತ್ ಪೋಲ್ ಬರುತ್ತದೆ ಅಲ್ಲಿ ಸುಟ್ಟು ಕೆಳಗೆ ಬೀಳುವಂತಹದ್ದು ನಡೆಯುತ್ತದೆ. ಆದ್ದರಿಂದ ದಯಮಾಡಿ ವಿದ್ಯುಚ್ಛಕ್ತಿ ಮಂಡಳಿಯವರು ಇದರ ಬಗ್ಗೆ ಸೂಕ್ತ ಗಮನವನ್ನು ಹರಿಸಿ ಸರ್ಕಾರ ಇಂತಹ ಸಾವನ್ನು ಅಪ್ಪಿರುವಂತಹ ಮಧುಸೂದನ್ ಮತ್ತು ಮೂಡಲಪ್ಪ ಇನ್ನೊಬ್ಬ ದಯಾನಂದ ಎಂಬುವನು ಕೆಇಬಿಯ ಎಂಡಿಆರ್‌ನಲ್ಲಿ ಕೆಲಸವನ್ನು ಮಾಡುತ್ತಿದ್ದ. ಅವನೂ ಕೂಡ ಮೊನ್ನೆ ಕಂಬದ ಹತ್ತಿರ ನಿಂತುಕೊಂಡ ಸಂದರ್ಭದಲ್ಲಿ ಸಾವನ್ನು ಅಪ್ಪಿದ್ದಾನೆ. ಆತನ ಕುಟುಂಬದವರಿಗೆ ಸರ್ಕಾರ 2 ಲಕ್ಷ ರೂಪಾಯಿ ಪರಿಹಾರವನ್ನು ನೀಡಿದೆ. ಈ ತರಹ ಆಗುತ್ತಿರುವುದರಿಂದ ದಯಮಾಡಿ ಸರ್ಕಾರದವರು ಇದರ ಬಗ್ಗೆ ಸೂಕ್ತ ಗಮನವನ್ನು ಹರಿಸಿ ಇಂತಹ ದುರ್ಘಟನೆಗಳು ಆಗದ ರೀತಿಯಲ್ಲಿ ನೋಡಿಕೊಳ್ಳಬೇಕು. ಇದರ ಬಗ್ಗೆ ಪರಿಹಾರವನ್ನು ಕೂಡ ಸಂಬಂಧಪಟ್ಟವರಿಗೆ ಒದಗಿಸಿಕೊಡಬೇಕೆಂದು ನಾನು ಸಂಬಂಧಪಟ್ಟವರಿಗೆ ತಮ್ಮ ಮುಖಾಂತರ ತಿಳಿಸುತ್ತಿದ್ದೇನೆ. ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ, ಸರ್ಕಾರದಿಂದ ಉತ್ತರ ಬಂದರೆ, ಹೀಗೆ ದುರ್ಮರಣಕ್ಕೀಡಾದವರಿಗೆ ಸರ್ಕಾರ ಯಾವ ರೀತಿ ಜನಗಳ ಕಷ್ಟಕ್ಕೆ ಸ್ಪಂದಿಸುತ್ತದೆ ಎನ್ನುವುದು ಗೊತ್ತಾಗುತ್ತದೆ.

ಉಪಾಧ್ಯಕ್ಷರು: ನೀವು ಪ್ರಸ್ತಾಪ ಮಾಡಿ, ಉತ್ತರ ಆಮೇಲೆ ಹೇಳುತ್ತಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಉಪಾಧ್ಯಕ್ಷರೆ, ಎರಡು ಪ್ರಶ್ನೆಯನ್ನು ಕೇಳಿದ್ದೇನೆ ಅದರಲ್ಲಿ ಇವತ್ತು ಯಾವುದನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ಗೊತ್ತಾಗುತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ಯಾವುದೆಂದು ನೀವು ನಿರ್ಣಯಿಸಿ, ಸಂಬಂಧಪಟ್ಟ ಇಲಾಖೆಯವರಿಗೆ ತಿಳಿಸುತ್ತೇನೆ.

ಉಪಾಧ್ಯಕ್ಷರು: ಎರಡು ಪ್ರಶ್ನೆಗಳಲ್ಲಿ ಯಾವುದು ಅರ್ಜೆಂಟ್ ಇದೆ ಅದರಲ್ಲಿ ಒಂದನ್ನು ಹೇಳಿ.

ಈ) ಆಶ್ರಯ ಯೋಜನೆಯಲ್ಲಿ ಶೇಕಡ 11ರಷ್ಟು ಬಡ್ಡಿ ವಿಧಿಸುತ್ತಿರುವ ಬಗ್ಗೆ

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಉಪಾಧ್ಯಕ್ಷರೆ, ನಾನು ವಸತಿ ಸಚಿವರಿಗೆ ಒಂದು ಪ್ರಶ್ನೆಯನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲು ಕೊಟ್ಟಿದ್ದೇನೆ. ಈ ಹೌಸಿಂಗ್ ಸ್ಕೀಮ್‌ನಲ್ಲಿ ಬ್ಯಾಂಕ್‌ನಲ್ಲಿ ಬಡ್ಡಿ ದರ ಶೇಕಡ 7 ರಷ್ಟು ಹಾಕುತ್ತಿದ್ದಾರೆ, ಈ ಹೌಸಿಂಗ್ ಸ್ಕೀಮ್‌ನಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಶೇಕಡ 11 ರಷ್ಟು ಚಾರ್ಜ್ ಮಾಡಿದ್ದರೆ ಅದನ್ನು ಶೇಕಡ 7 ಎಂದು ಮಾಡಲಿಕ್ಕೆ ಸಾಧ್ಯವಿಲ್ಲವೇ? ಏಕೆಂದರೆ ಶೇಕಡ 7 ಅಂದರೆ 10,000 ರೂಪಾಯಿ, ಅಸಲು ಹಾಗೂ ಬಡ್ಡಿ ಸೇರಿ ಪುನಃ 10,700 ರೂಪಾಯಿ ಆಗುತ್ತದೆ. ಆದಕ್ಕೋಸ್ಕರ 18 ವರ್ಷ ಕಾಲ ಅಸಲಿಗಿಂತ ಬಡ್ಡಿ ಜಾಸ್ತಿ ಆಗುತ್ತಿದೆ, ಅದನ್ನು ಕಡಿಮೆ ಮಾಡಲಿಕ್ಕೆ ಸಾಧ್ಯವಿಲ್ಲವೇ?

ಶ್ರೀ ಪಿ.ಆರ್. ಸಗೀರ್ ಅಹಮದ್: ಮಾನ್ಯ ಉಪಾಧ್ಯಕ್ಷರೆ, ಇವತ್ತು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಬಡ್ಡಿ ದರ ಕಡಿಮೆಯಾಗಿರುವಂತಹುದು ಎಲ್ಲರಿಗೂ ತಿಳಿದಿದೆ ಆದರೆ ಆಶ್ರಯ ಯೋಜನೆಯಡಿ ಫಲಾನುಭವಿಗಳಿಗೆ ಏನು ಸಾಲ ಕೊಡುತ್ತಿದ್ದೇವೆ ಅದಕ್ಕೆ ಶೇಕಡ 10 ರಷ್ಟು ಬಡ್ಡಿಯನ್ನು ವಿಧಿಸುತ್ತಿದ್ದೇವೆ, ಕರ್ನಾಟಕ ರಾಜ್ಯ ಸರ್ಕಾರ ಶೇಕಡ 1ರಷ್ಟು ಗ್ಯಾರಂಟಿ ಕಮಿಷನ್ ಎಂದು ಸೇರಿಸಿಕೊಂಡು ಶೇಕಡ 11 ರಷ್ಟು ಬಡ್ಡಿಯನ್ನು ವಿಧಿಸುತ್ತಿದ್ದಾರೆ. ಈ ಬಡ್ಡಿ ಹಣ ಹೆಚ್ಚು ಎನ್ನುವ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರದ ಜೊತೆಯಲ್ಲಿ ಸಮಾಲೋಚನೆ ನಡೆಸುತ್ತಿದ್ದೇವೆ. ಕೇಂದ್ರಸರ್ಕಾರದ ಆರ್ಥಿಕ ಇಲಾಖೆ ಜೊತೆಗೆ ಬಡ್ಡಿಯನ್ನು ಕಡಿಮೆ ಮಾಡುವುದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇವೆ, ಅವರು ಈಗ ಯೋಚನೆ ಮಾಡಿ ಒಂದು ತಿಳುವಳಿಕೆ ಕೊಡುತ್ತೇವೆಂದು ಸರ್ಕಾರಕ್ಕೆ ತಿಳಿಸಿದ್ದರೆ, ಆ ತಿಳುವಳಿಕೆ ಬರುವವರೆಗೆ ಕಾಯಬೇಕು, ಬಂದ ತಕ್ಷಣ ಈ ಕಾರ್ಯಕ್ರಮ ಜಾರಿಗೆ ತರುತ್ತೇವೆ.

ಊ) ಹಾವೇರಿ ಜಿಲ್ಲೆ ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆಯ ನೌಕರರಿಗೆ ಐದಾರು ತಿಂಗಳಿಂದ ವೇತನ ಬಟವಾಡೆ ಮಾಡದಿರುವುದು

ಶ್ರೀ ಬಸವರಾಜ್ ನೀಲಪ್ಪ ಶಿವಣ್ಣನವರ್: ಮಾನ್ಯ ಉಪಾಧ್ಯಕ್ಷರೆ, ನಮ್ಮ ಹಾವೇರಿ ಜಿಲ್ಲೆಯ ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆಯ ನೌಕರರಿಗೆ ಹಾಗೂ ಕಾರ್ಮಿಕರಿಗೆ ಕಳೆದ ಐದರು ತಿಂಗಳುಗಳಿಂದ ವೇತನ ಬಿಡುಗಡೆಯಾಗದೆ ಬಹಳಷ್ಟು ಕಷ್ಟದಲ್ಲಿ ಇದ್ದಾರೆ. ಮತ್ತು ಈಗಾಗಲೇ ಅವರು ಹಾವೇರಿ ಪಟ್ಟಣದಲ್ಲಿ ಪ್ರತಿಭಟನೆ ಮಾಡಿ, ಈಗ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ವೇತನದ ಸಲುವಾಗಿ ಸತ್ಯಾಗ್ರಹ ಮಾಡಲಿಕ್ಕೆ ಕ್ರಮ ಕೈಗೊಂಡಿದ್ದಾರೆ. ಕಳೆದ ವರ್ಷ ಸರ್ಕಾರ ಈ ಒಂದು ಸಕ್ಕರೆ ಕಾರ್ಖಾನೆ ಬಹಳಷ್ಟು ಕಷ್ಟದಲ್ಲಿದ್ದಾಗ ಆಗಿನ ಸಹಕಾರ ಸಚಿವರಾದ ಮಾನ್ಯ ಡಿ.ಕೆ.ಶಿವಕುಮಾರ್‌ರವರು ಸನ್ಮಾನ್ಯ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣರವರು ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯ ಸಗೀರ್ ಅಹಮದ್‌ರವರು ಮತ್ತು ಶಾಸಕರು, ಮಾನ್ಯ ಉಪಾಧ್ಯಕ್ಷರು ತಾವೂ ಕೂಡ ನಮ್ಮ ಜಿಲ್ಲೆಯವರಾಗಿದ್ದೀರಿ, ತಮಗೆ ಹೆಚ್ಚಿನ ಜವಾಬ್ದಾರಿಯಿರುವುದರಿಂದ ಇವತ್ತು 4 ಕೋಟಿ ರೂಪಾಯಿ ಮೃದು ಸಾಲವನ್ನು ಮಾನ್ಯ ಸರ್ಕಾರ ಹಾಗೂ ತಮ್ಮೆಲ್ಲರ ಪ್ರಯತ್ನದಿಂದ ಸಿಕ್ಕಿತ್ತು. ಕಳೆದ ಎರಡು ವರ್ಷಗಳಿಂದ ಕಾರ್ಖಾನೆ ಕೂಡ ನಡೆಯಿತು, ಆದರೆ ಕಳೆದ ಎರಡು ಮೂರು ವರ್ಷಗಳಿಂದ ಬರಗಾಲದಿಂದ ಇದಕ್ಕೆ ಬೇಕಾದಂತಹ ಕಬ್ಬು ಕೂಡ ಸಾಕಷ್ಟು ಸಿಗಲಿಲ್ಲ. ಈಗ ಕೇವಲ 1.00 ಲಕ್ಷ ಟನ್ ಕಬ್ಬನ್ನು ಅರೆಯತಕ್ಕಂತಹ ಕೆಲಸ ಮಾಡಿದೆ. ಈ ಕಾರಣದಿಂದ ಈಗಾಗಲೇ ನಮ್ಮ ಸಕ್ಕರೆ ನಿರ್ದೇಶಕರು ಒಂದು ಆದೇಶವನ್ನು ಮಾಡಿದ್ದಾರೆ, ಇರತಕ್ಕಂತಹ ಸಕ್ಕರೆ ದಾಸ್ತಾನನ್ನು ಮಾರಾಟ ಮಾಡಿ, ರೈತರಿಗೆ ಮೂರುವರೆ ಕೋಟಿ ರೂಪಾಯಿಗಳ ಬಾಕಿ ಕೊಡಬೇಕು ಎಂದು ಆದೇಶವನ್ನು ಮಾಡಿರುವುದರಿಂದ ನೌಕರರು ಬಹಳ ಕಂಗೆಟ್ಟು ಹೋಗಿದ್ದಾರೆ. ಈ ಕಾರಣಕ್ಕಾಗಿ ಏನು ಸಕ್ಕರೆ ದಾಸ್ತಾನಿನಿಂದ ಮಾರಾಟವಾಗಿ ಬಂದಿರತಕ್ಕಂತಹ ಹಣದಲ್ಲಿ ಕೆಲವೊಂದು ಪರ್ಸೆಂಟೇಜ್ ಹಣವನ್ನು ನೌಕರರಿಗೆ ವೇತನ ಬಿಡುಗಡೆ ಮಾಡಲಿಕ್ಕೆ ಕೂಡ ಒಂದು ಸರ್ಕಾರದಿಂದ, ಮಾನ್ಯ ಸಕ್ಕರೆ ಸಚಿವರಾಗಲೀ, ಸಹಕಾರಿ ಸಚಿವರಿಂದಗಲೀ ಸೂಕ್ತ ನಿರ್ದೇಶನವನ್ನು ಕೊಟ್ಟರೆ ಮಾತ್ರ ಆ ಕಾರ್ಮಿಕರು ಹೋರಟ ಮತ್ತು ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳಲು ಅನುಕೂಲವಾಗುತ್ತದೆ. ತಮ್ಮ ಮೂಲಕ ಒತ್ತಾಯಿಸುವುದೇನೆಂದರೆ ಆದಷ್ಟು ಬೇಗ ಕಳೆದ ಐದಾರು ತಿಂಗಳುಗಳಿಂದ ವೇತನ ಬಿಡುಗಡೆಯಾಗಿಲ್ಲದೆ ಬಹಳ ಕಷ್ಟದಲ್ಲಿರುವ ನೌಕರರು ಎಲ್ಲರೂ ಆರ್ಥಿಕ ಸ್ಥಿತಿವಂತರಲ್ಲ, ಆ ಬಡ